## ಬುಲೆಟ್‌ನ ಹೊಸ ವಿನ್ಯಾಸ

ರಾಯಲ್ ಎನ್‌ಫೀಲ್ಡ್ (ಬುಲೆಟ್) ದ್ವಿಚಕ್ರ ವಾಹನವನ್ನು ಮಾರ್ಪಡಿಸಿ ಹಿಂಭಾಗದ ಚಕ್ರಕ್ಕೆ ಬದಲಾಗಿ ಸರಕು ಸಾಗಾಣಿಕೆ ಟ್ರೇಲರನ್ನು ಅಳವಡಿಸಲಾಗಿದೆ. ವಸ್ತುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಈ ವಾಹನವನ್ನು ಬಳಸಲಾಗುತ್ತಿದೆ. ಕಟ್ಟಿಗೆಯನ್ನು ಹೊತ್ತಿರುವ ವಾಹನದ ಹಿಂಭಾಗದಲ್ಲಿ ಮಹಿಳೆಯೊಬ್ಬಳು ಕುಳಿತಿದ್ದಾಳೆ. ಇದು ಬಹೂಪಯೋಗಿ ವಾಹನವಾಗಿದ್ದು ಶಾಲಾ ಮಕ್ಕಳನ್ನು ಕರೆದೊಯ್ಯಲು, ಪ್ರಯಾಣಿಕರನ್ನು ಹೊತ್ತೊಯ್ಯುವ ವಾಹನವಾಗಿಯೂ ಬಳಸಲಾಗುತ್ತದೆ. ಈ ದೃಶ್ಯ ಕಂಡುಬಂದದ್ದು ಗುಜರಾತಿನ ದ್ವಾರಕಾದಲ್ಲಿ.

■ **ಕೆ.ಎಸ್. ಪ್ರಭಾಕರ ಗುಪ್ತ, ಹಾಸನ**





## ಜನ ಸಾಗಿಸುವ ತಳ್ಳುವಗಾಡಿ

ತರಕಾರಿ, ಹಣ್ಣು ಹಂಪಲು, ದಿನಬಳಕೆಯ ಅನೇಕ ವಸ್ತುಗಳನ್ನು ಮಾರಾಟ ಮಾಡಲು ನಮ್ಮಲ್ಲಿ ತಳ್ಳುವಗಾಡಿಯನ್ನು ಉಪಯೋಗಿಸುತ್ತಾರೆ. ಮೇಲಿನ ಚಿತ್ರವನ್ನು ಗಮನಿಸಿ. ಗುಜರಾತ್‌ನ ಬೆಟ್ ದ್ವಾರಕಾದಲ್ಲಿ (Bet Dwaraka) ಕಂಡು ಬಂದ ದೃಶ್ಯವಿದು. ಬಂದರಿನಿಂದ ಜನಗಳನ್ನು ಕರೆದೊಯ್ಯಲು ಮತ್ತು ಹಿಂತಿರುಗಿ ಬರುವವರನ್ನು ಕರೆತರಲು ಈ ತಳ್ಳುವಗಾಡಿಯನ್ನು ಅಲ್ಲಿನ ಕೆಲವರು ಬಳಸುತ್ತಿದ್ದಾರೆ. ಆ ಭಾಗದ ಶ್ರಮಿಕರ ಜೀವನೋಪಾಯದ ಮಾರ್ಗವೂ ಇದಾಗಿದೆ.

■ **ಬಿ.ವಿ. ಗುಂಡಣ್ಣ**

## ಒಂಬತ್ತಡಿ ಆಂಜನೇಯ

ಇದು ಬಳ್ಳಾರಿ ಜಿಲ್ಲೆ ಹರಪನಹಳ್ಳಿಯ ಗುಡಿಕೇರಿಯಲ್ಲಿನ ಮಾರುತಿ ಮೂರ್ತಿ. ಹಿರಿಯರು ಹೇಳುವ ಪ್ರಕಾರ ಕೆಲವೇ ಅಡಿಗಳಷ್ಟು ಉದ್ದ ಇದ್ದ ಈ ಮೂರ್ತಿ ಕ್ರಮೇಣ ಇಂಚಿಂಚಾಗಿ ಬೆಳೆಯಲಾರಂಭಿಸಿತ್ತಂತೆ. ಈ ಬಗ್ಗೆ ವಿದ್ವಾಂಸರು, ದೈವಿಕರು ಸಮಾಲೋಚಿಸಿ ದೇವರ ಅಣತಿಯಂತೆ ಮೂರ್ತಿಯ ತಲೆಯ ಮೇಲೆ ಹಾರೆಯಿಂದ ಒಂದು ಪೆಟ್ಟು ಹೊಡೆದ ಬಳಿಕ ಒಂಬತ್ತು ಅಡಿಗೆ ತನ್ನ ಬೆಳವಣಿಗೆಯನ್ನು ನಿಲ್ಲಿಸಿತಂತೆ. ನಿತ್ಯವೂ ನೂರಾರು ಮಂದಿ ಈ ಮೂರ್ತಿಯ ದರ್ಶನಕ್ಕೆ ಬರುತ್ತಾರೆ.

■ **ಕೆ. ಶ್ರೀನಿವಾಸರಾವ್, ಹರಪನಹಳ್ಳಿ**

